UASB LIBRARY
Newspaper Clippings
Pg .1 Tuesday 14-09-2021 Jai Kisan



ಕೃಷಿಗೆ ಪೂರಕವಾದ ತಂತ್ರಜ್ಞಾನಗಳಿಗೆ ಒತ್ತು ನೀಡಲು ನಿರ್ಧಾರ

ಭೌತಿಕವಾಗಿ ಕೃಷಿ ಮೇಳ ನಡೆಸಲು ವಿವಿ ಸಜ್ಜು

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರು ಕೃಷಿ ವಿವಿಯು ಅಕ್ಟೋಬರ್ ಕೊನೆಯ ವಾರದಲ್ಲಿ ಭೌತಿಕವಾಗಿ ಕೃಷಿ ಮೇಳ ನಡೆಸಲು ಚಿಂತನೆ ನಡೆಸಿದೆ. ಕೋವಿಡ್ ಪ್ರಮಾಣ ಇಳಿಕೆಯಾಗಿರುವುದರಿಂದ ವರ್ಚುಯಲ್ ಮೇಳದ ಜತೆಗೆ ಈ ಬಾರಿ ಭೌತಿಕವಾಗಿಯೂ ಮೇಳ ನಡೆಸಲಾಗುವುದು. ಕೃಷಿಗೆ ಪೂರಕವಾದ ತಂತ್ರಜ್ಞಾನಗಳಿಗೆ ಈ ಬಾರಿ ಹೆಚ್ಚು ಒತ್ತು ನೀಡಲು ವಿವಿ ನಿರ್ಧರಿಸಿದೆ.

ರಾಜ್ಯಾದ್ಯಂತ ಲಕ್ಷಾಂತರ ಮಂದಿ ರೈತರು ಮತ್ತು ರೈತಾಸಕ್ತರನ್ನು ಸೆಳೆಯುವ ಮೇಳ ಇದಾಗಿದೆ. ಸಾಮಾನ್ಯವಾಗಿ ಐದು ದಿನಗಳ ಕಾಲ ಕೃಷಿ ಮೇಳ ನಡೆಯುತ್ತಿತ್ತು. ಈ ಎಲ್ಲಾ ದಿನಗಳಲ್ಲೂ ರಾಜ್ಯದ ಎಲ್ಲಾ ಭಾಗಗಳಿಂದ ರೈತರು, ಕೃಷಿ ಆಸಕ್ತರು, ಉದ್ಯಮಿಗಳು, ಮಾರಾಟಗಾರರು, ವಿದ್ಯಾರ್ಥಿಗಳು ಸೇರಿದಂತೆ ಲಕ್ಷಾಂತರ ಮಂದಿ ಮೇಳವನ್ನು ವೀಕ್ಷಿಸುತ್ತಿದ್ದರು. ಮಾಹಿತಿ ತಿಳಿಯಲು ಹಾಗೂ ಖರೀದಿಗೆ ಪೂರಕವಾಗಿರುವಂತಹ ವಿಶಿಷ್ಟ ಮೇಳ ಇದು.

ಆದರೆ ಕೋವಿಡ್‌ನ ಅಬ್ಬರ ಹೆಚ್ಚಾದ ಹಿನ್ನೆಲೆಯಲ್ಲಿ ಕಳೆದ ವರ್ಷ ಆನ್‌ಲೈನ್‌ನಲ್ಲಿ ಮೇಳವನ್ನು ನಡೆಸಲಾಗಿತ್ತು. ಈ ಬಾರಿ ಭೌತಿಕವಾಗಿ ಮೇಳ ನಡೆಸುವ ಅಭಿಲಾಷೆಯನ್ನು ಹೊಂದಲಾಗಿದೆ.

''ಅಕ್ಟೋಬರ್ ಕೊನೆಗೆ ಇಲ್ಲವೇ ನವೆಂಬರ್ ಮೊದಲ ವಾರದಲ್ಲಿ ಮೇಳ ನಡೆಸುತ್ತೇವೆ. ಇದೀಗ ಸೆಪ್ಟೆಂಬರ್ 21ರಂದು ಬೆಂಗಳೂರು ಕೃಷಿ ವಿವಿಯ 55ನೇ ಘಟಿಕೋತ್ಸವ ನಡೆಯಲಿದೆ. ಅದರ ತಯಾರಿಯಲ್ಲಿದ್ದೇವೆ. ಅದು ಮುಗಿದ ಕೂಡಲೇ ಮೇಳದ ಬಾಕಿಯಿರುವ ಕೆಲಸಗಳು ಆರಂಭವಾಗಲಿವೆ. ಈಗಾಗಲೇ ಮೇಳಕ್ಕಾಗಿ ಭತ್ತದ ತಳಿಗಳು, ರಾಗಿ, ನವಣೆ, ಸಾಮೆ, ಬರಗು, ಬೀಜದ ದಂಟು, ಮೇವಿನ ಗೋಧಿ ತಳಿ... ಹೀಗೆ ಹಲವು ಹೊಸ ತಳಿಯ ಬೆಳೆಗಳನ್ನು ಬೆಳೆಸಲಾಗಿದೆ'' ಎಂದು ಬೆಂಗಳೂರು ಕೃಷಿ ವಿವಿ ಕುಲಪತಿ ಡಾ. ಎಸ್. ರಾಜೇಂದ್ರ ಪ್ರಸಾದ್ ತಿಳಿಸಿದರು.





ಕೃಷಿ ಚಟುವಟಿಕೆಗಳಿಗೆ ಪೂರಕವಾದ ತಂತ್ರಜ್ಞಾನಗಳಿಗೆ ಈ ಬಾರಿ ಮೇಳದಲ್ಲಿ ಹೆಚ್ಚಿನ ಒತ್ತು ನೀಡಲಾಗುವುದು. ಭೌತಿಕವಾಗಿ ಮತ್ತು ವರ್ಚುಯಲ್ ಮೂಲಕವೂ ಮೇಳವನ್ನು ನಡೆಸಲಾಗುವುದು.
-ಡಾ. ಎಸ್. ರಾಜೇಂದ್ರ ಪ್ರಸಾದ್
ಕುಲಪತಿ, ಬೆಂಗಳೂರು ಕೃಷಿ ವಿವಿ

ಕೋವಿಡ್ ಹಿನ್ನೆಲೆಯಲ್ಲಿ ದೂರದ ಊರುಗಳಿಂದ ಮೇಳಕ್ಕೆ ಬರಲಾಗದವರು ತಾವು ಇರುವಲ್ಲಿಂದಲೇ ವೀಕ್ಷಣೆಗೆ ಅನುಕೂಲವಾಗುವಂತೆ ಆನ್‌ಲೈನ್‌ನಲ್ಲೂ ಮೇಳದ ವೀಕ್ಷಣೆಗೆ ವ್ಯವಸ್ಥೆ ಮಾಡಲಾಗುತ್ತಿದೆ.

''ಈ ಬಾರಿಯ ಕೃಷಿ ಮೇಳದಲ್ಲಿ ಬಿಡುಗಡೆ ಮಾಡಲು ಎಂಟರಿಂದ ಹತ್ತು ಹೊಸ ಹೊಸ ತಳಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇವುಗಳ ಪ್ರಾತ್ಯಕ್ಷಿಕೆಗಳಿಗಾಗಿ ಸಿದ್ಧತೆ ಮಾಡಲಾಗಿದೆ. ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಬೇಸಾಯ ಪದ್ಧತಿಯ 28 ಹೊಸ ತಾಂತ್ರಿಕತೆಗಳನ್ನೂ ಪರಿಚಯಿಸಲಾಗುವುದು. ಇದರ ಜತೆಗೆ ಎಂದಿನಂತೆ ಪ್ರದರ್ಶನ ಮಳಿಗೆಗಳಿರುತ್ತವೆ. ನಾನಾ ಸರಕಾರಿ ಮತ್ತು ಖಾಸಗಿ ಇಲಾಖೆಗಳ ಮಳಿಗೆಗಳಿರುತ್ತವೆ. ನಿಖರ ಬೇಸಾಯ ಪದ್ಧತಿಗೆ ಹೆಚ್ಚು ಒತ್ತು ನೀಡಲಾಗುವುದು'' ಎಂದು ಕುಲಪತಿಗಳು ನುಡಿದರು.

ಹೊಸ ತಳಿಗಳ ಪರಿಚಯ: ಈ ಹಿಂದೆ ಅಭಿವೃದ್ಧಿಪಡಿಸಿದ ತಳಿಗಳಿಗಿಂತ ಶೇ.10ರಷ್ಟು ಹೆಚ್ಚು ಇಳುವರಿ ನೀಡುವ ಸಾಮರ್ಥ್ಯ ಹೊಂದಿರುವ, ರೋಗ ನಿರೋಧಕ ಶಕ್ತಿಯನ್ನು ಹೊಂದಿರುವ ನಾನಾ ತಳಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಈ ಪೈಕಿ ಹೆಚ್ಚು ಇಳುವರಿ ಮತ್ತು ಬೆಂಕಿರೋಗ ನಿರೋಧಕ ಶಕ್ತಿಯುಳ್ಳ ಭತ್ತದ ಎರಡು ತಳಿಗಳು, ಬುಡ ಕೊಳೆ ರೋಗ ನಿರೋಧಕ ಹೊಂದಿರುವ ರಾಗಿ, ತುಕ್ಕು ಮತ್ತು ಎಲೆ ಅಂಗಮಾರಿ ರೋಗಗಳಿಂದ ಪಾರಾಗಬಲ್ಲ ನವಣೆ, ಕಂದು ಚುಕ್ಕೆ ರೋಗ ತಡೆಯಬಲ್ಲ ಸಾಮೆ ಮತ್ತು ಬರಗು ತಳಿಗಳು, ಗೋಳಾಕಾರದಿಂದ ಕೂಡಿರುವ ಹೂ ಗೊಂಚಲುಗಳ ಬೀಜದ ದಂಟು, ಮೇವಿಗಾಗಿ ತೋಕೆ ಗೋಧಿ, ಸ್ವಯಂ ಗರಿ ಕಳಚುವುದರ ಜತೆಗೆ ರುಚಿಕರವಾದ ಬೆಲ್ಲ ತಯಾರಿಗೆ ಯೋಗ್ಯವಾದ ಕಬ್ಬು, ಕಡಿಮೆ ಅಂಟು ಪ್ರಮಾಣ ಮತ್ತು ಹೆಚ್ಚು ಸಕ್ಕರೆ ಅಂಶ ಹೊಂದಿರುವ 'ಬೈರಚಂದ್ರ' ಎಂಬ ಹಲಸು ಹೀಗೆ ಹತ್ತಾರು ಹೊಸ ಬೆಳೆಗಳ ತಳಿಗಳು ಮೇಳಕ್ಕಾಗಿ ಸಜ್ಜಾಗಿವೆ.

14-09-2021
Vk Pg 07

GENETIC CLUES

Scientists unlock Similipal 'black tiger' mystery

KALYAN RAY
NEW DELHI, DHNS

Biologists from Bengaluru on Monday unravelled a genetic secret associated with a small set of Indian tigers that are found in a solitary tiger reserve – Similipal in Odisha.

The tigers in Similipal have an unusually broad and fused stripes, which make them appear dark.

The answer to the mystery – why such a unique look and why such tigers are seen only in Simlipal – provided vital clues on what needs to be done to save them from extinction, scientists said.



A captive pseudomelanistic tiger at Nandankanan Biological Park, Bhubaneswar.

Going by the 2018 tiger census, India houses an estimated 2,967 tigers, of which 8 are known to be staying within the 2,750 sq km Odisha park, whereas another 12 were using the tiger reserve.

According to the new study conducted by an Indo-US team led by researchers at the National Centre for Biological Sciences, Bengaluru, nearly 30-40% of Similipal tigers are pseudomelanistic. Such tigers have thick stripes so close together that the tawny background is barely visible.

The NCBS team traced the genetic root behind such an unusual look back to a single mutation in the tiger genome that was carried forward in successive generations due to the isolated nature of the tiger population, leading to inbreeding.

▸ Tiger, Page 5

14-09-2021
Dec Hrd Pg 01

"Set your heart upon your work but never its reward"

ಕೃಷಿ ಸುಸ್ಥಿರತೆ ಹಾಗೂ ನೆಲ–ಜಲ ಆರೋಗ್ಯ ಭಂಜಿಸುತ್ತಿರುವ ಅಡಿಕೆ ನೆಡುತೋಪಿನ ಉನ್ಮಾದ

ಉಳಿಯುವುದೇ ಅಡಿಕೆ ರೈತರ ಮಾನ?



ವಿಶ್ಲೇಷಣೆ

ಡಾ. ಕೇಶವ ಎಚ್. ಕೊರ್ಸೆ

ಅಡಿಕೆ ಬೆಲೆಯು ಕ್ವಿಂಟಲ್‌ಗೆ ಐವತ್ತು ಸಾವಿರ ರೂಪಾಯಿಗೂ ಮೀರಿ ಮುನ್ನುಗ್ಗುತ್ತಿದೆ. ಕಳೆದ ಮೂರು ದಶಕಗಳಿಂದಂತೂ ತೀವ್ರ ಏರಿಳಿತ ಕಾಣುತ್ತಿರುವ ಅಡಿಕೆ ಧಾರಣೆಯು ಇದೀಗ ಮತ್ತೊಂದು ದಾಖಲೆಯ ಏರಿಕೆಯತ್ತ ಸಾಗುತ್ತಿರುವಂತಿದೆ. ದೇಶೀಯ ಉತ್ಪಾದನಾ ಕೊರತೆ ಹಾಗೂ ಆಮದಿನ ನಿರ್ಬಂಧ- ಇವೆರಡರ ಪರಿಣಾಮವಾಗಿ ಸೃಷ್ಟಿಯಾಗಿರಬಹುದಾದ ಈ ವಿದ್ಯಮಾನವು ಮಾರುಕಟ್ಟೆಯಲ್ಲಿ ಸಂಚಲನ ಮೂಡಿಸುತ್ತಿದೆ.

ಜನಜೀವನ ಹಾಗೂ ಆರ್ಥಿಕತೆಯ ಬಹುಪಾಲು ಆಯಾಮಗಳು ಕೋವಿಡ್ ಸಂಕಷ್ಟಕ್ಕೆ ತುತ್ತಾಗಿರುವಾಗ, ಕೃಷಿ ಉತ್ಪನ್ನವೊಂದಕ್ಕೆ ಈ ಪರಿಯ ಬೆಲೆ ಬಂದಿರುವುದು ಕುತೂಹಲದ ಸಂಗತಿಯೇ ಸರಿ. ಮಾರುಕಟ್ಟೆ ಆರ್ಥಿಕತೆಯನ್ನೇ ನೆಚ್ಚುವ ಉದಾರವಾದಿ ಅರ್ಥಶಾಸ್ತ್ರಜ್ಞರು, ಇದನ್ನೊಂದು 'ಹೊಸ ಹಸಿರುಕ್ರಾಂತಿ' ಎಂಬಂತೆ ವರ್ಣಿಸಿದರೂ ಆಶ್ಚರ್ಯವಿಲ್ಲ!

ಆದರೆ, ಒಂದೆರಡು ಎಕರೆಗಳಷ್ಟೇ ಜಮೀನಿರುವ ಅಡಿಕೆಕೃಷಿಯ ಬಹುಸಂಖ್ಯಾತ ಸಣ್ಣ ರೈತರು, ಈ ಬೆಲೆ ಹೆಚ್ಚಳವನ್ನು ಸಂಭ್ರಮಿಸುತ್ತಿಲ್ಲ. ಏಪ್ರಿಲ್- ಮೇ ತಿಂಗಳ ಬೇಸಿಗೆಯಲ್ಲೇ ಅಡಿಕೆ ಹಂಗಾಮು ಮುಗಿದು, ಬಹುಪಾಲು ರೈತರು ಕೈಯಲ್ಲಿದ್ದ ಫಸಲು ಮಾರಿಯಾಗಿದೆ. ಶ್ರಾವಣ- ಭಾದ್ರಪದದ ಈಗಿನ ಬೆಲೆಯೇರಿಕೆಯ ಲಾಭವಾಗುವುದು ಕೇವಲ ಮಧ್ಯವರ್ತಿಗಳು ಮತ್ತು ದೊಡ್ಡ ರೈತರಿಗೆ ಎಂಬುದು ಅವರ ಅನುಭವ. ಆದರೆ, ಅವರನ್ನು ತೀವ್ರ ಚಿಂತೆಗೀಡುಮಾಡಿರುವುದು ಈ ಕ್ಷಣದ ನಷ್ಟವನ್ನೂ ಮೀರಿದ ಕೆಲವು ಗಂಭೀರ ಸವಾಲುಗಳು. ಅವು ಕೇವಲ ಅಡಿಕೆ ಬೆಳೆಗಾರರನ್ನಷ್ಟೇ ಅಲ್ಲ, ಸಮಗ್ರ ಕೃಷಿ ಕ್ಷೇತ್ರದ ಸುಸ್ಥಿರತೆ ಹಾಗೂ ನಾಡಿನ ಸಾಮಾಜಿಕ-ಆರ್ಥಿಕ ಪರಿಸ್ಥಿತಿಯನ್ನೇ ಪ್ರಭಾವಿಸುತ್ತಿರುವುದರಿಂದ, ಈ ಕುರಿತು ಗಂಭೀರ ಚಿಂತನೆಯಾಗಬೇಕಿದೆ.

ಉಷ್ಣವಲಯದ ಈ ಏಕದಳ ಪ್ರಭೇದವು ಕರಾವಳಿ ಹಾಗೂ ಸಹ್ಯಾದ್ರಿಯ ಕೃಷಿಬೆಳೆಯಾಗಿ ವಿಕಾಸವಾಗಿ ಸಹಸ್ರಮಾನವೇ ಕಳೆದಿದೆ. ಕಣಿವೆಗಳ ಜೌಗಿನಲ್ಲಿ ಭತ್ತದ ಗದ್ದೆಯ ಜೊತೆ ಅಡಿಕೆಯನ್ನೂ ಅಲ್ಲಿನ ರೈತರು ಬೆಳೆದರು. ಹೊಳೆ- ಕೆರೆಗಳ ನೀರು ಹಾಗೂ ಸಗಣಿ- ತರಗೆಲೆಗಳ ಗೊಬ್ಬರವಷ್ಟನ್ನೇ ಬಳಸಿ ಬಾಳೆ, ಕಾಳುಮೆಣಸು, ತೆಂಗು, ವೀಳ್ಯದೆಲೆ, ಏಲಕ್ಕಿ, ಜಾಯಿಕಾಯಿ ಇತ್ಯಾದಿ ವೈವಿಧ್ಯಮಯ ಬೆಳೆಗಳೊಂದಿಗೆ ಅಡಿಕೆ ಬೆಳೆಯುವ ಅವರ ಸಹಜಕೃಷಿ ಸಂಸ್ಕೃತಿಯೇ ಅನನ್ಯವಾದದ್ದು.

ಇತ್ತೀಚಿನವರೆಗೂ ಅವರು ಬಳಸುತ್ತಿದ್ದ ಆಧುನಿಕ ಮದ್ದೆಂದರೆ, ಕೊಳೆಯಂಥ ಶಿಲೀಂಧ್ರಜನ್ಯ ರೋಗ ನಿಯಂತ್ರಿಸಲು ಸಿಂಪಡಿಸುವ ಮೈಲುತುತ್ತ ದ್ರಾವಣ ಮಾತ್ರ. ಕಾಡುಹಂದಿ, ಕಾಡುಕೋಣದಂಥ ವನ್ಯಪ್ರಾಣಿಗಳ ಹಾವಳಿ ನಿಭಾಯಿಸುತ್ತ, ಮಳೆಗಾಲದ ನಿರಂತರ ಮಳೆಯಿಂದ ಫಸಲು ರಕ್ಷಿಸಿಕೊಳ್ಳಲು ಮರವನ್ನೇರಿ ಅವಕ್ಕೆ ಹುಲ್ಲು ಅಥವಾ ಅಡಿಕೆಹಾಳೆ ಹೊದಿಸುತ್ತ, ಪರಿಶ್ರಮದಿಂದ ಸಾಧಿಸಿದ ಸಂಕೀರ್ಣ ಬೇಸಾಯ ಕ್ರಮವಿದು.

ಮಧ್ಯಯುಗದಿಂದ ಇತ್ತೀಚಿನ ದಶಕಗಳವರೆಗಿನ ದೀರ್ಘ ಇತಿಹಾಸವನ್ನೊಮ್ಮೆ ಅವಲೋಕಿಸಿದರೆ, ಜೀವನೋಪಾಯಕ್ಕಾಗಿ ಹಲವು ತಲೆಮಾರುಗಳು ಕಟ್ಟಿಕೊಟ್ಟ ಈ ಅದ್ಭುತ ಕೃಷಿಪರಂಪರೆಯ ಪರಿಚಯವಾಗುತ್ತದೆ.

ಈ ಅನನ್ಯ ಅಡಿಕೆಕೃಷಿಗೆ ಇಂದು ಎದುರಾಗಿರುವ ಎರಡು ಪ್ರಮುಖ ಬಿಕ್ಕಟ್ಟುಗಳಲ್ಲಿ ಮೊದಲಿನದು, ಬದಲಾಗುತ್ತಿರುವ ಅಡಿಕೆಕೃಷಿಯ ಚಹರೆ. ಇತ್ತೀಚಿನ ದಶಕಗಳಲ್ಲಿ ಅಡಿಕೆಯು ಅಪ್ಪಟ ವಾಣಿಜ್ಯ ಬೆಳೆಯಾಗಿ ಪರಿವರ್ತಿತವಾಯಿತಷ್ಟೇ? ಅಡಿಕೆ ಕೃಷಿಯು ಆಗ ಹಣವುಳ್ಳವರ ಹೂಡಿಕೆ ಕ್ಷೇತ್ರವಾಗತೊಡಗಿತು! ಕರಾವಳಿ ಹಾಗೂ ಮಲೆನಾಡಿನ ಭತ್ತದಗದ್ದೆ, ಗುಡ್ಡ-ಕಣಿವೆಗಳೆಲ್ಲ ಅಡಿಕೆ ತೋಟಗಳಾಗತೊಡಗಿವೆ. ಇದರಿಂದ ಪ್ರಭಾವಿತರಾದ ಅರೆಮಲೆನಾಡು ಹಾಗೂ ಬಯಲುನಾಡಿನ ರೈತರು, ಹತ್ತಿಪ್ಪತ್ತು ಎಕರೆ ದಿಢೀರ್ ಅಡಿಕೆ ನೆಡುತೋಪು ನಿರ್ಮಿಸುವ ಕಾರ್ಯಕ್ಕಿಳಿದಿದ್ದಾರೆ.

ದೇಶದ ಸುಮಾರು ನಾಲ್ಕೂವರೆ ಲಕ್ಷ ಹೆಕ್ಟೇರ್ ಭೂಮಿಯಲ್ಲಿ ವಾರ್ಷಿಕ ಒಂಬತ್ತು ಲಕ್ಷ ಟನ್ ಅಡಿಕೆ ಉತ್ಪಾದನೆಯಾಗುತ್ತಿದ್ದು, ಜಗತ್ತಿನಲ್ಲೇ ಮೊದಲ ಸ್ಥಾನದಲ್ಲಿದೆ. ಇದರಲ್ಲಿ ಮುಕ್ಕಾಲು ಭಾಗ ಕರ್ನಾಟಕದ್ದೇ. ಕಳೆದ ಐದು ವರ್ಷಗಳಲ್ಲಿ ಇದರ ಬೆಳವಣಿಗೆ ದರ ಶೇ 55ಕ್ಕೂ ಮಿಕ್ಕಿದೆಯೆಂದು, ರಾಜ್ಯಸಭೆಗೆ ಇತ್ತೀಚೆಗೆ ನೀಡಿದ ಮಾಹಿತಿಯಲ್ಲಿ ಕೇಂದ್ರ ಸರ್ಕಾರವೇ ಹೇಳಿದೆ.

ರಾಷ್ಟ್ರವು ಜಾಗತಿಕ ಅಡಿಕೆ ಸಾಮ್ರಾಟನಾಗುತ್ತಿದೆಯೆಂದು ಸಂಭ್ರಮಿಸಬೇಕೆ? ಅದಕ್ಕೆ ಬೇರೆ ಮುಖವೂ ಇದೆಯಲ್ಲ! ಕರಾವಳಿಯ ಸಮೃದ್ಧ ಜೌಗು, ಮಲೆನಾಡಿನ ವೈವಿಧ್ಯಮಯ ಕಾಡು, ಬಯಲುನಾಡಿನ ಫಲವತ್ತಾದ ಭೂಮಿ- ಎಲ್ಲವೂ ಅಡಿಕೆ ಪಾಲಾಗುತ್ತಿವೆ. ಇತ್ತೀಚೆಗಂತೂ ಬೃಹತ್ ಯಂತ್ರ ಬಳಸಿ ಕಾಡು- ಗೋಮಾಳಗಳನ್ನೆಲ್ಲ ಸವರಿ ಒಮ್ಮೆಲೇ ಅಡಿಕೆತೋಟ ನಿರ್ಮಿಸುವ ಉನ್ಮಾದವೇ ಹಬ್ಬುತ್ತಿದೆ. ತೋಟಗಾರಿಕೆಯ ಮೂಲಸೂತ್ರವಾಗಬೇಕಾದ ಮಿಶ್ರಬೆಳೆ ಹಾಗೂ ಕೃಷಿಅರಣ್ಯ ತತ್ವಗಳು ಮಾಯವಾಗುತ್ತಿವೆ. ಹೊಳೆ- ಕೆರೆಗಳೆಲ್ಲ ಬತ್ತಿ ಬೇಸಿಗೆಯಲ್ಲಿ ನೀರಿಲ್ಲದಾಗಿ, ಎಲ್ಲೆಂದರಲ್ಲಿ ಕೊಳವೆಬಾವಿ ನಿರ್ಮಿಸಿ ಅಂತರ್ಜಲವನ್ನೆತ್ತಿ ನೀರುಣಿಸಲಾಗುತ್ತಿದೆ. ಹವಾಮಾನ ಬದಲಾವಣೆಯೋ ಅಥವಾ ಪರಿಸರಸ್ನೇಹಿಯಲ್ಲದ ಬೇಸಾಯ ಕ್ರಮಗಳಿಂದಾಗಿಯೋ ಹೊಸದಾಗಿ ತಲೆದೋರುತ್ತಿರುವ ಕೀಟ ಹಾಗೂ ಸೂಕ್ಷ್ಮಾಣುಜನ್ಯ ರೋಗಗಳನ್ನು



ನಿಯಂತ್ರಿಸಲು ಮೋನೊಕ್ರೊಟೊಫಾಸ್ ಸೇರಿದಂತೆ ಆರ್ಗನೋಫಾಸ್ಫೇಟ್, ಕಾರ್ಬಾಮೇಟ್ಸ್ ತೆರನ ಕೃತಕ ಕ್ರಿಮಿನಾಶಕಗಳನ್ನು ಮಿತಿಮೀರಿ ಬಳಸಲಾಗುತ್ತಿದೆ.

ಹಣ ಗಳಿಸಲಿಕ್ಕೆಂದೇ ಉಳ್ಳವರು ಅಡಿಕೆ ಬೆಳೆಯಲು ನುಗ್ಗುತ್ತಿರುವುದರ ಪರಿಣಾಮವಿದು. ರಿಯಲ್ ಎಸ್ಟೇಟ್ ತೆರನಲ್ಲಿ ಅಂಕೆಗೆ ಸಿಗದೆ ಬೆಳೆಯುತ್ತಿದೆ ಅಡಿಕೆ ನೆಡುತೋಪು ಉದ್ಯಮ! ಲಾಭವೇ ಮುಖ್ಯವಾಗುವ ವಾಣಿಜ್ಯೋದ್ಯಮದ ಹಿಡಿತಕ್ಕೆ ಸಿಲುಕಿ, ಜೀವನೋಪಾಯಕ್ಕಾಗಿನ ಪಾರಂಪರಿಕ ಕೃಷಿಸಂಸ್ಕೃತಿಯೊಂದು ವಿಕೃತಿಯಾಗುತ್ತಿರುವ ಬಗೆಯಿದು.

ಅಡಿಕೆಯೇನೂ ಆಹಾರ ಬೆಳೆಯಲ್ಲ. ದಕ್ಷಿಣ ಏಷ್ಯಾ ಮತ್ತು ಅರಬ್ ರಾಷ್ಟ್ರಗಳಿಗೆ ರಫ್ತಾಗುವುದಾದರೂ ಅದೇನೂ ಗಮನಾರ್ಹ ಪ್ರಮಾಣದ್ದಲ್ಲ. ದೇಶದೊಳಗೆ ಬಳಕೆಯಾಗಬೇಕಾದ ಸರಕಿದು. ಮೂಲತಃ ಬಳಸುವುದು ಪಾರಂಪರಿಕ ಧಾರ್ಮಿಕ ವಿಧಿವಿಧಾನಗಳ ಪೂಜಾವಸ್ತುವಾಗಿ, ತಾಂಬೂಲಕ್ಕಾಗಿ, ಮನೆಮದ್ದು ಹಾಗೂ ಆಯುರ್ವೇದದ ಔಷಧಗಳ ಧಾತುವಾಗಿ. ಈಗ ನಿಷೇಧವಾಗಿರುವ ಗುಟ್ಕಾದಂಥ ತಂಬಾಕು ಉತ್ಪನ್ನಗಳ ಭಾಗವಾಗಿಯೂ ಅಡಿಕೆ ಬಳಕೆಯಾಗುತ್ತಿದೆ. ಇನ್ನುಳಿದ ಬದಲಿ ಉಪಯೋಗಗಳೆಲ್ಲ ಸೀಮಿತವಾಗಿದ್ದು, ಅಡಿಕೆ ಬಳಕೆಗೊಂದು ಮಿತಿಯಿದೆ. ಇದಾವುದನ್ನೂ ಗಮನಿಸದೆ ಅಡಿಕೆ ನೆಡುತೋಪು ಮಾತ್ರ ಹೆಚ್ಚುತ್ತಲೇ ಇದೆ!

ಕಳವಳಕಾರಿಯಾದ ಎರಡನೆಯ ಸಂಗತಿಯು ಅದರ ಸುರಕ್ಷತೆಯ ಕುರಿತಾದದ್ದು. ಅಡಿಕೆಯಲ್ಲಿರುವ 'ಅರೆಕೋಲಿನ್' ಅಂಶ ಅಪಾಯಕಾರಿಯೆಂದು ಗುರುತಿಸಿರುವ ವಿಶ್ವ ಆರೋಗ್ಯ ಸಂಸ್ಥೆಯು, ತಂಬಾಕಿನಂಥ 'ಕ್ಯಾನ್ಸರ್‌ಕಾರಕ' ಉತ್ಪನ್ನಗಳ ಪಟ್ಟಿಯಲ್ಲಿ ಅದನ್ನಿರಿಸಿದೆ. ದೇಶದ ಆಹಾರ ಸುರಕ್ಷತೆ ಮತ್ತು ಮಾನದಂಡ ನಿರ್ವಹಣಾ ಪ್ರಾಧಿಕಾರವೂ (FSSAI) ಅಡಿಕೆಯನ್ನು ಅಪಾಯಕಾರಿ ಆಹಾರವೆಂದೇ ಗುರುತಿಸಿದೆ. ತಂಬಾಕು ಬಳಸದೆ ಅಡಿಕೆ ಸೇವಿಸಿದರೆ ಆರೋಗ್ಯಕ್ಕೆ ಅಪಾಯವಿಲ್ಲವೆಂಬುದನ್ನು ಹಲವು ಸಂಶೋಧಕರು ದಾಖಲೆಗಳೊಂದಿಗೆ ಮಂಡಿಸುತ್ತಿರುವರಾದರೂ, ಅದನ್ನು ಜಾಗತಿಕ ಆರೋಗ್ಯ ವಿಜ್ಞಾನ ಲೋಕ ಒಪ್ಪುತ್ತಿಲ್ಲ. ಹೀಗಾಗಿ ಸುರಕ್ಷತೆಯ ಮುದ್ರೆ ಬೀಳುವವರೆಗೆ, ಮಾರುಕಟ್ಟೆಯಲ್ಲಿ ಅಡಿಕೆಯ ಸ್ಥಾನವು ಎಂದಿಗೂ ಡೋಲಾಯಮಾನವೇ.

ಬೇಡಿಕೆಯ ಕೊರತೆ, ಆರೋಗ್ಯವಿಜ್ಞಾನದ ವಿಧಿ- ನಿಷೇಧಗಳು ಅಥವಾ ನ್ಯಾಯಾಲಯಗಳ ತೀರ್ಪುಗಳಿಂದಾಗಿ ಭವಿಷ್ಯದಲ್ಲಿ ಅಡಿಕೆಯ ಬಳಕೆಯಾವಾಗಲಾದರೂ ಕುಸಿಯಬಹುದು. ಆಗ ಬೆಲೆ ಇಳಿದರೆ ನೆಡುತೋಪುಗಳ ನವಕೃಷಿಕರೆಲ್ಲ ಕೃಷಿಭೂಮಿಯನ್ನು ಬೇರೆ ಉದ್ಯಮಕ್ಕೆ ಹೊರಳಿಸಿಯಾರು. ಆದರೆ, ಜೀವನೋಪಾಯಕ್ಕಾಗಿ ಅಡಿಕೆ ಬೆಳೆಯುತ್ತಿರುವ ಮಲೆನಾಡು ಹಾಗೂ ಕರಾವಳಿಯ ಲಕ್ಷಾಂತರ ಸಣ್ಣರೈತರು ಮಾತ್ರ ತೋಟದ ನಿರ್ವಹಣಾ ವೆಚ್ಚವನ್ನೂ ನಿರ್ವಹಿಸಲಾಗದೆ ಬೀದಿಪಾಲಾದಾರು!

ಗಗನಕ್ಕೇರಿದ ಅಡಿಕೆ ಆರ್ಥಿಕತೆಯಲ್ಲಿ ಪಾಲು ಗಳಿಸಲೇ ಎಲ್ಲರೂ ನಿರತರಾಗಿರುವಾಗ, ಅಡಿಕೆಯ ಅಡಿಪಾಯವೇ ಕುಸಿಯುತ್ತಿರುವುದನ್ನು ಕೃಷಿನೀತಿ ನಿರೂಪಕರಾದರೂ ಗುರುತಿಸಬೇಕಿದೆ. ಸಹಕಾರಿ ಕ್ಷೇತ್ರವೂ ಸೇರಿದಂತೆ ರೈತ ಸಂಘಟನೆಗಳು ಹಾಗೂ ಸರ್ಕಾರವು ಅಡಿಕೆ ಸಣ್ಣರೈತರ ಭವಿಷ್ಯದ ಮಾನ ಕರಗದಂತೆ ನೋಡಿಕೊಳ್ಳಬೇಕಿದೆ.

ಲೇಖಕ: ನಿರ್ದೇಶಕ, ಸಂರಕ್ಷಣಾ ಜೀವಶಾಸ್ತ್ರ ಮತ್ತು ಸುಸ್ಥಿರ ಅಭಿವೃದ್ಧಿ ಅಧ್ಯಯನ ಕೇಂದ್ರ, ಶಿರಸಿ

CLIMATE

WELLINGTON: Scientists say they have successfully "potty trained" cows to urinate in a designated toilet area as part of a programme aimed at slashing greenhouse gas emissions.

The team of New Zealand and German researchers admitted the idea began as a joke but said dealing with cows' nitrogen-rich liquid waste could have genuine long-term climate benefits.

"If we could collect 10 or 20 percent of urinations, it would be sufficient to reduce greenhouse gas emission and nitrate leaching significantly," Auckland University's Douglas Elliffe said.

Elliffe said the nitrogen in cow pee broke down into two problem substances over time -- nitrous oxide, a potent greenhouse gas, and nitrate, which collects in soil then leaches into rivers and streams.

Nitrous oxide accounts for about five percent of global greenhouse gas emissions and just under 10 percent of New Zealand's total, according to official data, with more than half linked to livestock.

Researcher Lindsay Matthews said that the idea of toilet training cows so their urine could be captured and treated first occurred to him when a radio host was interviewing him in 2007 and made a throwaway joke on the matter.

"People's reaction is 'crazy scientists' but actually the building blocks are there," he said.

People's reaction is 'crazy scientists' but the building blocks are there

Researcher Lindsay Matthews said, referring to responses to his joke-idea in 2007

Working with colleagues in Germany, the scientists used food rewards to train 16 calves to urinate in a latrine pen, saying the results were similar to those you would expect from a three-year-old child.

Elliffe said the research, published this week in the journal Current Biology, provided "proof of concept" that toilet training cows was possible.

He said the challenge was to upscale the concept to train large herds and adapt it for cows in environments such as New Zealand, where the animals live outdoors rather than spending most of their time in barns.

Farming creates about half of New Zealand's greenhouse emissions, mostly in the form of methane and nitrous oxide. Unusually for a developed nation, New Zealand's farm-reliant economy means methane accounts for about 43.5 percent of the country's emissions, almost equal to the amount of carbon dioxide generated by sources such as fossil fuels.



Researcher Lindsay Matthews poses next to cows in New Zealand | AFP

14-09-2021 Ind Exp Pg 16

For more information visit
University Library Website
Web - uasbagrilibindia.org
E-mail- librarian@uasbangalore.edu.in

Visit our Youtube Channel for Video Documents.

Scan QR code